# ಸೇಂಟ್ ಲೂಯಿಸ್

## ಅಮೆರಿಕದ 'ಚಾರಿತ್ರಿಕ ಹೆಬ್ಬಾಗಿಲ ನಗರ'



ಅಮೆರಿಕದ ಮಹಾನಗರಗಳ ಪ್ರಭಾವಳಿ ಸೇಂಟ್ ಲೂಯಿಸ್‌ಗಿಲ್ಲ. ಆದರೆ, ಈ ನಗರದ ಚಾರಿತ್ರಿಕ ಹಿನ್ನೆಲೆ ಉಳಿದ ನಗರಗಳಿಗಿಂತ ಇದನ್ನು ಭಿನ್ನವಾಗಿಸಿದೆ. ಮಿಸ್ಸಿಸ್ಸಿಪ್ಪಿ ನದಿಯ ನೆರಳಿನ ಈ ನಗರ ಸಾಂಸ್ಕೃತಿಕ ಶ್ರೀಮಂತಿಕೆಯ ಕಾರಣದಿಂದಲೂ ಗಮನಸೆಳೆಯುತ್ತದೆ.

■ ಡಾ. ಬಿ.ಆರ್. ಗುರುಪ್ರಸಾದ್

ಸೇಂಟ್ ಲೂಯಿಸ್ – ಅಮೆರಿಕದ ಈ ನಗರ, ನ್ಯೂಯಾರ್ಕ್, ಷಿಕಾಗೊ, ಲಾಸ್ ಏಂಜಲೀಸ್, ಸ್ಯಾನ್‌ಫ್ರಾನ್ಸಿಸ್ಕೊ, ಮುಂತಾದ ಮಹಾ ನಗರಗಳಷ್ಟು ಪ್ರಸಿದ್ಧವಲ್ಲ. ಆದರೆ ಅಮೆರಿಕದ ಚಾರಿತ್ರಿಕ, ಭೌಗೋಳಿಕ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದ ಸೇಂಟ್ ಲೂಯಿಸ್ ನಗರಕ್ಕೆ ಭವ್ಯ ಪರಂಪರೆ ಇದೆ. ಈ ಸುಂದರ ನಗರವನ್ನು ಸಂದರ್ಶಿಸುವ ಅವಕಾಶ ಹಾಗೂ ಅದರಿಂದ ಉತ್ಕೃಷ್ಟ ಅನುಭವ ಇತ್ತೀಚೆಗೆ ನನಗೆ ದೊರಕಿತು; ಇಂದಿನ ಅಮೆರಿಕದ ವಿವಿಧ ಮುಖಗಳನ್ನು ಪರಿಚಯಿಸಿಕೊಳ್ಳುವುದು ಸಾಧ್ಯವಾಯಿತು.

ಚಳಿಗಾಲ ಪ್ರಾರಂಭವಾಗುವುದಕ್ಕೆ ಸುಮಾರು ಎರಡು ತಿಂಗಳುಗಳ ಮುಂಚೆ ಸೇಂಟ್ ಲೂಯಿಸ್ ಪರಿಸರದ ಮರಗಳ ಹಸುರು ಬಣ್ಣದ ಎಲೆಗಳು ಹಳದಿ, ಕಿತ್ತಳೆ ಇಲ್ಲವೇ ಕೆಂಪುಬಣ್ಣವನ್ನು ತಳೆದು ನಿಧಾನವಾಗಿ ಉದುರಲು ಆರಂಭಿಸುತ್ತವೆ. ಹೂತಳೆದು ನಿಂತ ಮರಗಳು ನಗರದ ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸುತ್ತವೆ.

ಸೇಂಟ್ ಲೂಯಿಸ್ ಅಮೆರಿಕದ 'ಮಧ್ಯ ಪಶ್ಚಿಮ'ದ (ಮಿಡ್ ವೆಸ್ಟ್) ರಾಜ್ಯಗಳಲ್ಲೊಂದಾದ ಮಿಸ್ಸೋರಿಯಲ್ಲಿದೆ. ನ್ಯೂಯಾರ್ಕ್, ಷಿಕಾಗೊ ಇಲ್ಲವೇ ಸ್ಯಾನ್‌ಫ್ರಾನ್ಸಿಸ್ಕೊ ನಗರಗಳಲ್ಲಿರುವಂತಹ ಬೃಹತ್ ಗಗನಚುಂಬಿ ಕಟ್ಟಡಗಳು ಸೇಂಟ್ ಲೂಯಿಸ್‌ನಲ್ಲಿ ಹೆಚ್ಚಾಗಿ ಕಂಡುಬರುವುದಿಲ್ಲ. ಅಮೆರಿಕದ ಈಶಾನ್ಯ (ನಾರ್ತ್ ಈಸ್ಟ್) ಹಾಗೂ ಪಶ್ಚಿಮದ ಭಾಗಗಳ ನಡುವೆ ಇರುವ ಭಾಗಕ್ಕೆ 'ಮಿಡ್ ವೆಸ್ಟ್' ಎಂಬ ಹೆಸರಿದೆ. ಇನ್ನು ಈ ಭಾಗದ ಉತ್ತರಕ್ಕೆ ಕೆನಡಾ ದೇಶ ಇದ್ದರೆ, ದಕ್ಷಿಣದಲ್ಲಿ ಅಮೆರಿಕದ 'ದಕ್ಷಿಣ' ಭಾಗವಿದೆ.

ಸೇಂಟ್ ಲೂಯಿಸ್ ನಗರವನ್ನು ಫ್ರೆಂಚ್ ತುಪ್ಪಳದ (ಫರ್) ವ್ಯಾಪಾರಿಗಳು 18ನೇ ಶತಮಾನದಲ್ಲಿ ಸ್ಥಾಪಿಸಿ, ಒಂದು ಕಾಲದ ತಮ್ಮ ದೊರೆ 9ನೇ ಲೂಯಿಯ ಬಿರುದಾದ ಸೇಂಟ್ ಲೂಯಿಸ್ ಅನ್ನೇ ನಗರಕ್ಕೂ ನೀಡಿದರು.

### ಹೆಬ್ಬಾಗಿಲ ಕಮಾನು

ಸೇಂಟ್ ಲೂಯಿಸ್ ಎಂದರೆ ಅಮೆರಿಕನ್ನರ ಹಾಗೂ ಉತ್ಸಾಹಿ ಪ್ರವಾಸಿಗಳ ನೆನಪಿಗೆ ಬರುವುದು ಅಲ್ಲಿರುವ ದೈತ್ಯ ಕಮಾನಿನಂತಹ ಕಟ್ಟಡ. ಬಿಲ್ಲಿನಂತೆ ಬಾಗಿರುವ ಈ 'ಮಹಾದ್ವಾರ ಕಮಾನು' (ಗೇಟ್ ವೇ ಆರ್ಚ್), ನಗರದ ಸಂಕೇತ. ಇದು ಜಗತ್ತಿನ ಅತಿದೊಡ್ಡ ಮಾನವ ನಿರ್ಮಿತ ಕಮಾನಾಗಿದೆ.

ಭೌಗೋಳಿಕ ವ್ಯಾಪ್ತಿಯ ದೃಷ್ಟಿಯಿಂದ ಇಂದು ಭಾರತಕ್ಕಿಂತ ಮೂರು ಪಟ್ಟು ದೊಡ್ಡದಾಗಿರುವ ಅಮೆರಿಕ, ಹತ್ತೊಂಬತ್ತನೇ ಶತಮಾನದಲ್ಲಿ ಸೇಂಟ್ ಲೂಯಿಸ್‌ನಿಂದ ಪ್ರಾರಂಭಿಸಿ, ತನ್ನ ಪಶ್ಚಿಮದ ಗಡಿಯನ್ನು ಅಪಾರವಾಗಿ ವಿಸ್ತರಿಸಿಕೊಳ್ಳಲು



ನಗರ ಸೌಂದರ್ಯದ ಪ್ರತೀಕದಂತೆ ನಿಂತಿರುವ ಓ ಫ್ಯಾಲನ್ನಿನ ಒಂದು ಮರ